2)	ಅಂಬೇಡ್ಕರ್	-	20,000
3)	ವಿಶೇಷ ವೃತ್ತಿನಿರತರವರಿಗೆ	-	20,000
4)	ಇಂದಿರಾ ಆವಾಜ್	-	31,456

ರಾಜ್ಯದಲ್ಲಿ ಅತಿವೃಷ್ಟಿಯಿಂದ ಆಗಿರುವ ಅನಾಹುತ

2978 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇತ್ತೀಚಿನ ಅತಿವೃಷ್ಟಿಯಿಂದಾಗಿ ಸಾರ್ವಜನಿಕರ ಆಸ್ತಿ ಹಾನಿಗೊಳಗಾಗಿದೆಯೆ? ಹಾಗೂ ರಸ್ತೆ, ಕೆರೆಕಟ್ಟೆಗಳು ವಿರೂಪಗೊಂಡಿದಿಯೆ?*

ಆ) *ಯಾವ ಯಾವ ಜಿಲ್ಲೆಗಳು ಹಾನಿಗೊಳಗಾಗಿವೆ?*

ಇ) *ಸಂತ್ರಸ್ಥರಿಗೆ ಪರಿಹಾರ ನೀಡಲಾಗಿದಿಯೆ?*

ಈ) *ಸಂಪರ್ಕ ವ್ಯವಸ್ಥೆಯ ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿದೆಯೆ?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಎಲ್ಲಾ ಜಿಲ್ಲೆಗಳು.

ಇ) ಹೌದು.

ಉ) ಹೌದು.

ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಹೊಸ ಡಿಪೋಗಳ ಪ್ರಾರಂಭ

2979 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಡಿಪೋಗಳು ಎಷ್ಟು ಇವೆ?*

ಆ) *ಮಂಡ್ಯ ಜಿಲ್ಲೆಯಲ್ಲಿ ನೂತನ ಡಿಪೋಗಳನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?*

ಇ) *ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ?*

ಈ) *ಮಂಡ್ಯ ಡಿಪೋವನ್ನು ಯಾವಾಗ ಪ್ರಾರಂಭಿಸಲಾಯಿತು?*

ಉ) ಈ ಡಿಪೋ ಲಾಭದಲ್ಲಿ ಇದೆಯೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಒಂದು.

ಆ) ಹೌದು.

ಇ) ಕ.ರಾ.ರ.ಸಾ. ಸಂಸ್ಥೆಯು ತಾಂತ್ರಿಕ ಆಧಾರದ ಮೇಲೆ ಮದ್ದೂರಿನಲ್ಲಿ ಘಟಕ ಒಂದನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಸೂಕ್ತ ಜಾಗವನ್ನು ನೀಡುವಂತೆ ತೋಟಗಾರಿಕೆ ಇಲಾಖೆಯವರನ್ನು ನೀಡುವಂತೆ ತೋಟಗಾರಿಕೆ ಇಲಾಖೆಯವರನ್ನು ಕೋರಲಾಗಿದೆ. ಮಳವಳ್ಳಿಯಲ್ಲಿ ಘಟಕವನ್ನು ಪ್ರಾರಂಭಿಸಲು ಏಳು ಎಕರೆ ಜಾಗವನ್ನು ಪಡೆಯಲಾಗಿದ್ದು. ಇದು ಕೆರೆ ಅಂಗಳ ಆಗಿರುವುದರಿಂದ ಇಲ್ಲಿ ಘಟಕ ನಿರ್ಮಿಸುವುದು ಸೂಕ್ತವಲ್ಲ ಎಂದು ಕಂಡುಬಂದಿದೆ. ಮದ್ದೂರಿನಲ್ಲಿ ಘಟಕ ಕಾರ್ಯಾರಂಭ ಮಾಡಿದಲ್ಲಿ ಮಳವಳ್ಳಿಯಲ್ಲಿ ಘಟಕ ನಿರ್ಮಿಸುವ ಅವಶ್ಯಕತೆ ಬಗ್ಗೆ ಪರಿಶೀಲಿಸಲಾಗುವುದು. ಕೆ.ಆರ್. ಪೇಟೆಯಲ್ಲಿ ಘಟಕ ನಿರ್ಮಿಸಲು ಪಡೆದುಕೊಂಡಿರುವ ಜಾಗವು ಸೂಕ್ತವಾಗಿರುವುದಿಲ್ಲ, ನಾಗಮಂಗಲದಲ್ಲಿ ಘಟಕ ನಿರ್ಮಿಸುವ ಸಲುವಾಗಿ ಯಾವುದೇ ಜಾಗವು ಲಭ್ಯವಿರುವುದಿಲ್ಲವೆಂಬುದಾಗಿ ತಾಲ್ಲೂಕಿನ ತಹಶೀಲ್ದಾರ್‌ರವರು ತಿಳಿಸಿರುತ್ತಾರೆ.

ಈ) ಮಂಡ್ಯ ಘಟಕವನ್ನು ದಿನಾಂಕ 01-05-1989 ರಂದು ಪ್ರಾರಂಭಿಸಲಾಯಿತು.

ಉ) ಹೌದು.

ರಾಜ್ಯದಲ್ಲಿ ಎ.ಪಿ.ಎಂ.ಸಿ. ಗಳ ವತಿಯಿಂದ ರೈತರಿಗೆ ನೀಡುವ ಸೌಲಭ್ಯ

2980 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿವೆ?

ಆ) ಈ ಮಾರುಕಟ್ಟೆ ಸಮಿತಿಗಳಿಂದ ಮಾರುಕಟ್ಟೆ ಶುಲ್ಕ ವಸೂಲಾತಿಯಿಂದ ಎಷ್ಟು ಹಣ ಸಂದಾಯವಾಗಿರುತ್ತದೆ?

ಇ) ಎಪಿಎಂಸಿ ವತಿಯಿಂದ ರೈತರಿಗೆ ನೀಡುತ್ತಿರುವ ಸೌಲಭ್ಯಗಳು ಯಾವುವು?

ಈ) ಎಪಿಎಂಸಿ ಮಾರುಕಟ್ಟೆಯಾರ್ಡ್‌ನಲ್ಲಿ ರೈತರ ಉತ್ಪನ್ನಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗಿದೆಯೆ?

ಶ್ರೀ ಆರ್.ಬಿ. ತಿಮ್ಮಾಪುರ್ : (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು)

ಅ) 139.